THE HINDU

Dated, Monday, 26th June– 2017 Pg.No.03

# KEA tells medical, dental seat aspirants to exercise option 2

## Seat allotment done for engineering, agriculture, veterinary courses

STAFF REPORTER
BENGALURU

The first round of seat allotment under CET for engineering, agriculture and veterinary courses was completed on Sunday.

With many candidates anticipating counselling for medical and dental seats, the Karnataka Examinations Authority has urged students to exercise option 2, which is for students who are satisfied with their allotted seats but wish to participate in the next round.

This option makes them eligible to participate in the subsequent round by keeping their allotted seat on hold. KEA, in a press note, stated that it would conduct seat allotment to medical and dental seats shortly. Counselling will take place based on how students fared in the National Eligibility-cum-Entrance Test. Several candidates, who are aspiring for medical and dental seats, have taken part in the counselling process and chosen an engineering seat. They said they would give up the seat if they get medical and dental seats, of which there is a limited number.

The COMEDK said that the first round of allotment would be done on Monday. "We have decided to do this after the government requested us to postpone the counselling process in the interest of students," a COMEDK official said. Several students had demanded that COMEDK counselling be postponed as these seats are three times more expensive than government quota seats.

THE HINDU
DISCLAIMER: Readers are requested to verify and make appropriate enquiries to satisfy themselves about the veracity of an advertisement before responding to any published in this newspaper. Kasturi & Sons Limited, the Publisher & Owner of this newspaper, does not vouch for the authenticity of any advertisement or advertiser or for any of the advertiser's products and/or services. In no event can the Owner, Publisher, Printer, Editor, Director/s, Employees of this newspaper/company be held responsible/liable in any manner whatsoever for any claims and/or damages for advertisements in this newspaper.

ಕನ್ನಡಪ್ರಭ



# ನೀಟ್: ಮೇಲ್ಜಾತಿಗೆ ಶೇ.50.5 'ಮೀಸಲು'

ಚೆನ್ನೈ: ವೈದ್ಯ, ದಂತವೈದ್ಯ ಕೋರ್ಸ್‌ಗೆ ನೀಟ್ ಪರೀಕ್ಷೆಯಲ್ಲಿ ಶೇ.15 ಸೀಟು ಮೀಸಲಾತಿ ಹೊಂದಿರುವ 'ಅಖಿಲ ಭಾರತ ಕೋಟಾ'ದಲ್ಲಿ ಇನ್ನು ಮುಂದೆ ಸಾಮಾನ್ಯ ವರ್ಗ ಹಾಗೂ ಮೀಸಲು ವರ್ಗಗಳಿಗೆ ಪ್ರತ್ಯೇಕ ಕೌನ್ಸೆಲಿಂಗ್ ನಡೆಯಲಿದೆ. ಇದರಲ್ಲಿ ಮೀಸಲು ವರ್ಗ ಶೇ.49.5 ಹಾಗೂ ಸಾಮಾನ್ಯ ವರ್ಗ ಶೇ.50.5 ಮೀಸಲು ಪಡೆಯಲಿವೆ.

ವಿವರ ↘ 9

ಕನ್ನಡಪ್ರಭ



# ವೈದ್ಯ ಸೀಟು: ಮೀಸಲಾತಿಗೆ ಶೇ.50 ಮೀಸಲು

## ಶೇ.15 ಅಖಿಲ ಭಾರತ ಕೋಟಾಕ್ಕೆ ಅನ್ವಯ | ಸಾಮಾನ್ಯ, ಮೀಸಲು ವರ್ಗಕ್ಕೆ ಪ್ರತ್ಯೇಕ ಕೌನ್ಸೆಲಿಂಗ್

ಚೆನ್ನೈ: ವೈದ್ಯ ಮತ್ತು ದಂತವೈದ್ಯ ಕೋರ್ಸ್‌ಗಳಿಗೆ ಸಂಬಂಧಿಸಿದ 'ನೀಟ್' ಪರೀಕ್ಷೆಗೆ ಸಂಬಂಧಿಸಿದಂತೆ ಮಹತ್ವದ ಆದೇಶವೊಂದನ್ನು ಸರ್ಕಾರ ಹೊರಡಿಸಿದೆ. ಈ ಪ್ರಕಾರ ಶೇ.15ರಷ್ಟು ಸೀಟು ಮೀಸಲಾತಿ ಹೊಂದಿರುವ 'ಅಖಿಲ ಭಾರತ ಕೋಟಾ'ದಲ್ಲಿ ಇನ್ನು ಮುಂದೆ ಸಾಮಾನ್ಯ ವರ್ಗ (ಜನರಲ್ ಕೆಟಗರಿ) ಹಾಗೂ ಮೀಸಲು (ರಿಸರ್ವ್ಡ್) ವರ್ಗಗಳಿಗೆ ಪ್ರತ್ಯೇಕ ಕೌನ್ಸೆಲಿಂಗ್ ನಡೆಯಲಿದೆ.

'ಮೀಸಲು ವರ್ಗ ಶೇ.49.5 ಹಾಗೂ ಸಾಮಾನ್ಯ ವರ್ಗ ಶೇ.50.5 ಮೀಸಲು ಪಡೆಯಲಿವೆ. ಇವುಗಳಿಗೆ ಪ್ರತ್ಯೇಕ ಕೌನ್ಸೆಲಿಂಗ್ ನಡೆಯಲಿದೆ' ಎಂದು ಕೇಂದ್ರ ಆರೋಗ್ಯ ಕಾರ್ಯದರ್ಶಿ ಸಿ.ಕೆ. ಮಿಶ್ರಾ ಆಂಗ್ಲ ಪತ್ರಿಕೆಯೊಂದಕ್ಕೆ ತಿಳಿಸಿದ್ದಾರೆ.

ಈವರೆಗೆ ಮೀಸಲು ವರ್ಗದ ವಿದ್ಯಾರ್ಥಿ



ಸಾಮಾನ್ಯ ವರ್ಗದ ವಿದ್ಯಾರ್ಥಿಗಳಷ್ಟೇ ಅಂಕ ಗಳಿಸಿದರೆ ಆತನಿಗೆ ಸಾಮಾನ್ಯ ವರ್ಗದಲ್ಲಿ ಸೀಟು ಲಭಿಸುತ್ತಿತ್ತು. ಇದರಿಂದ ಮೀಸಲು ವರ್ಗಕ್ಕೆ ಆ ವಿಭಾಗದಲ್ಲಿ ಒಂದು ಹೆಚ್ಚುವರಿ ಸೀಟು ಲಭ್ಯವಾದಂತಾಗುತ್ತಿತ್ತು. ಜೊತೆಗೆ ಸಾಮಾನ್ಯ ವರ್ಗಕ್ಕೆ ಒಂದು ಸೀಟು ತಪ್ಪುತ್ತಿತ್ತು. ಆದರೆ, ಸರ್ಕಾರದ ಈ ಆದೇಶದಿಂದಾಗಿ ಉತ್ತಮ ಅಂಕ ಗಳಿಸಿದ ಮೀಸಲು ವರ್ಗದ ವಿದ್ಯಾರ್ಥಿಗೆ ಸಾಮಾನ್ಯ ವರ್ಗದಲ್ಲಿ ಸೀಟು ಪಡೆಯುವ ಅವಕಾಶ ತಪ್ಪಿಹೋಗಲಿದೆ.

ನೀಟ್‌ನಲ್ಲಿ ರಾಜ್ಯ ಕೋಟಾದ ಅಡಿ ಶೇ.85 ಹಾಗೂ ಅಖಿಲ ಭಾರತ ಕೋಟಾದಡಿ ಶೇ.15 ಸೀಟು ಹಂಚಿಕೆಗೆ ಅವಕಾಶವಿದೆ. ಈಗ ಹೊರಡಿಸಿರುವ ಆದೇಶ ಅಖಿಲ ಭಾರತ ಕೋಟಾದ ಶೇ.15 ಸೀಟುಗಳಿಗೆ ಮಾತ್ರ ಸಂಬಂಧಿಸಿದ್ದಾಗಿದೆ. ಇದು 9,775 ಅಖಿಲ ಭಾರತ ಕೋಟಾ ಸೀಟುಗಳ ಮೇಲೆ ಪರಿಣಾಮ ಬೀರಲಿದೆ ಎಂದು ವರದಿ ಹೇಳಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ತಮಿಳುನಾಡು ಆರೋಗ್ಯ ಸಚಿವಾಲಯದ ಅಧಿಕಾರಿಗಳು, 'ಈ ಬಗ್ಗೆ ನಮಗೆ ಹೆಚ್ಚಿನ ಮಾಹಿತಿ ಇಲ್ಲ. ಕೇಂದ್ರ ಸರ್ಕಾರದ ಬಳಿ ಕೂಡಲೇ ಈ ಬಗ್ಗೆ ಸ್ಪಷ್ಟನೆ ಕೇಳಲಾಗುತ್ತದೆ' ಎಂದಿದ್ದಾರೆ.

# ಸಿಇಟಿ: ಮೊದಲ ಸುತ್ತಿನ ಸೀಟು ಹಂಚಿಕೆ ಪ್ರಕಟ

**ವಿಕ ಸುದ್ದಿಲೋಕ** ಬೆಂಗಳೂರು

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸಿಇಟಿ-2017ನೇ ಸಾಲಿನ ಮೊದಲ ಸುತ್ತಿನ ಸೀಟು ಹಂಚಿಕೆ ಫಲಿತಾಂಶವನ್ನು ಭಾನುವಾರ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

2017ನೇ ಸಾಲಿನಲ್ಲಿ ನಾನಾ ಕೋರ್ಸ್‌ಗಳಿಗೆ ಸರಕಾರ ನಿಗದಿಪಡಿಸಿರುವ ಸೀಟ್ ಮ್ಯಾಟ್ರಿಕ್ಸ್ ಅನ್ನು ಅನುಸರಿಸಿಕೊಂಡು, ಅಭ್ಯರ್ಥಿಗಳ ಮೆರಿಟ್ ಮತ್ತು ಆಯ್ಕೆ ಆಧರಿಸಿ ಸೀಟು ಹಂಚಿಕೆ ಮಾಡಲಾಗಿದೆ.

ಅಭ್ಯರ್ಥಿಗಳು ಎಂಜಿನಿಯರಿಂಗ್, ಆರ್ಕಿಟೆಕ್ಚರ್, ಅಗ್ರಿಕಲ್ಚರ್, ವೆಟರ್ನರಿ ಸೀಟನ್ನು ಆಯ್ಕೆಮಾಡಿಕೊಳ್ಳಲು ಚಾಯ್ಸ್-2 ನೀಡಿ ತಮ್ಮೊಡನೆ ಇಟ್ಟುಕೊಂಡು ವೈದ್ಯ/ದಂತ ವೈದ್ಯ ಕೋರ್ಸ್‌ಗಳ ಪ್ರವೇಶಕ್ಕೆ ಸೀಟು ಹಂಚಿಕೆಯಲ್ಲೂ ಭಾಗವಹಿಸಬಹುದು.

ಆದ್ದರಿಂದ ಮೊದಲನೇ ಸುತ್ತಿನಲ್ಲಿ ಹಂಚಿಕೆಯಾಗಿರುವ ಸೀಟುಗಳಿಗೆ ಯಾವುದೇ ಆಯ್ಕೆ ಮಾಡುವ ಮೊದಲು ಪ್ರತಿ ಆಯ್ಕೆಯ ಪರಿಣಾಮವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಬ್ರೋಚರ್‌ನಲ್ಲಿ ನೀಡಿರುವ ಮಾಹಿತಿಯನ್ನು ಓದಿ ಅರ್ಥೈಸಿಕೊಂಡು ಮುಂದಿನ ಸುತ್ತುಗಳಲ್ಲಿ ಭಾಗವಹಿಸಲು ನಿಗದಿಪಡಿಸಿರುವ ಅರ್ಹತೆ ಮತ್ತು ಮುಂದಿನ ಸುತ್ತುಗಳಲ್ಲಿ ಸಿಗಬಹುದಾದ ಸೀಟುಗಳನ್ನು ಗಮನದಲ್ಲಿಟ್ಟುಕೊಂಡು ಪೋಷಕರ ಜತೆ ಚರ್ಚಿಸಿ ಸೂಕ್ತವಾದುದನ್ನು ಆಯ್ಕೆ ಮಾಡಿಕೊಳ್ಳಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗೆ ಅಭ್ಯರ್ಥಿಗಳು ಸಂಪರ್ಕಿಸಬಹುದಾದ ಪ್ರಾಧಿಕಾರದ ವೆಬ್‌ಸೈಟ್ ವಿಳಾಸ: http://kea.kar.nic.in